ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃರವರ
ನ್ಯಾಯಾಲಯದಲ್ಲಿ, ನ.ರಾ.ಪುರ.
ಸಿಸಿ ನಂ 143/2026

ಸಿ ಡಬ್ಲ್ಯೂಃ– 08/ಪಿ ಡಬ್ಲ್ಯೂ ಃ-03

ಸಾಕ್ಷಿದಾರರ ಹೆಸರು ಃ ಪವನ್ ಎಲ್.ಎಂ.
ತಂದೆಯ ಹೆಸರು ಃ ಮಂಜುನಾಥ ಗೌಡ
ವಯಸ್ಸು ಃ 35 ವರ್ಷ
ಉದ್ಯೋಗ ಃ ಕೃಷಿ
ವಾಸಸ್ಥಳ ಃ ಲಿಂಗಾಪುರ, ಶಿವಮೊಗ್ಗ ತಾಲೂಕು

ದಿನಾಂಕಃ 23-06-2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.
ಮುಖ್ಯವಿಚಾರಣೆ ಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

1. ಸಾಕ್ಷಿಗೆ ಒಂದು ಕೃತ್ಯ ಸ್ಥಳದ ಮಹಜರ್ ಹಾಗೂ ಅಮಾನತು ಮಹಜರ್ ಅನ್ನು ತೋರಿಸಲಾಗಿ ಸಾಕ್ಷಿಯು ಸದರಿ ದಾಖಲೆಗಳಲ್ಲಿ ಸಾಕ್ಷಿಯು ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಗಳನ್ನು ಈಗಾಗಲೇ ನಿಪಿ-2 ಮತ್ತು ನಿಪಿ-3 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಗಳನ್ನು ನಿಪಿ-2(ಬಿ) ಮತ್ತು ನಿಪಿ-3(ಬಿ) ಎಂದು ಗುರುತಿಸಲಾಯಿತು. ನಿಪಿ-2 ಮತ್ತು ನಿಪಿ-3 ರಲ್ಲಿ ಬರೆದ ವಿಚಾರಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸಾಕ್ಷಿಯು ತಮ್ಮ ಭಾವಚಿತ್ರ ಇರುವ 7 ಪೋಟೋಗಳನ್ನು ಹಾಗೂ ಒಂದು ಸಿ.ಡಿ.ಯನ್ನು ನೋಡಿ ಗುರುತಿಸಿದ್ದು, ಸದರಿ ಪೋಟೋಗಳನ್ನು ಈಗಾಗಲೇ ನಿಪಿ-4 ರಿಂದ ನಿಪಿ-11 ಎಂದು ಗುರುತಿಸಲಾಗಿರುತ್ತದೆ. ನಿಪಿ- 4 ರಿಂದ ನಿಪಿ-11 ಭಾವಚಿತ್ರಗಳನ್ನು ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನಮ್ಮ ಸಮಕ್ಷಮ ಯಾವುದೇ ಮಹಜರ್ ಮತ್ತು ಯಾವುದೇ ವಸ್ತುಗಳನ್ನು ಅಮಾನತು ಪಡಿಸಿಕೊಂಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಕೋರಿಕೊಂಡಿದ್ದು, ಪರಿಗಣಿಸಿ ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

1. ದಿಃ 13.12.2025 ರಂದು ಚಾಸಾ-9 ರವರು ತೋರಿಸಿದ ಶೇಡಿಗಾರು ಗ್ರಾಮದ ಗುಡ್ರಳ್ಳಿ ಕ್ರಾಸ್ ಹತ್ತಿರ ದಿಃ 12.12.2025 ರಂದು ಟ್ರಾಕ್ಟರ್ ಚಾಲಕನಾದ ಧನುಷ ಇವರು ಅಡಿಕೆ ಚೀಲದ ಲೋಡ್ ಇದ್ದ ಟ್ರಾಕ್ಟರ್ ಅನ್ನು ದುಡುಕು ಮತ್ತು ಅಜಾಗರುಕತೆಯಿಂದ ಚಾಲನೆ ಮಾಡಿಕೊಂಡು ಹೋಗಿ ಟ್ರೈಲರ್ ಮೇಲೆ ಕುಳಿತ್ತಿದ್ದ

ಕೃಷ್ಣಮೂರ್ತಿ ಬಿದ್ದು ಗಾಯಗಳಾಗಿದ್ದ ಜಾಗಾ ಇದೆ ಎಂದು ತೋರಿಸಿದ ಮೇರೆಗೆ ನನ್ನ ಮತ್ತು ಚಾಸಾ-7 ರವರ ಸಮಕ್ಷಮ ಮಧ್ಯಾಹ್ನ 4.30 ರಿಂದ 5.30 ರ ಅವಧಿಯಲ್ಲಿ ನಿಪಿ-2 ರಂತೆ ಕೃತ್ಯ ಸ್ಥಳದ ಮಹಜರ್ ಅನ್ನು ಮಾಡಿ ಆ ಕಾಲಕ್ಕೆ ನಿಪಿ-4 ರಿಂದ ನಿಪಿ-6 ರಂತೆ ಭಾವಚಿತ್ರಗಳನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

2. ಅದೇ ದಿನ ಸಂಜೆ 6.00 ಗಂಟೆಯಿಂದ 6.45 ರ ಅವಧಿಯಲ್ಲಿ ಹಾತೂರು ಗ್ರಾಮದ ಪ್ರಸನ್ನ ಇವರ ಮನೆಯ ಮುಂದೆ ಚಾಸಾ-9 ರವರ ಸಮಕ್ಷಮ ನನ್ನ ಹಾಗೂ ಚಾಸಾ-7 ರವರ ಸಮಕ್ಷಮ ಟ್ರಾಕ್ಟರ್ ಸಂಖ್ಯೆ KA 18 TB 2190 ಸ್ವರಾಜ್ ಕಂಪನಿಯ ಟ್ರಾಕ್ಟರ್ ಅನ್ನು ಹಾಗೂ ಟ್ರೈಲರ್ ಸಂಖ್ಯೆ KA 18 TB 2126 ವಾಹನವನ್ನು ಅಮಾನತು ಪಂಚನಾಮೆಯ ಮೂಲಕ ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆ ಕಾಲಕ್ಕೆ ನಿಪಿ-7 ರಿಂದ ನಿಪಿ-10 ರಂತೆ ಭಾವಚಿತ್ರಗಳನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಸಮಕ್ಷಮ ನಿಪಿ-2 ಮತ್ತು ನಿಪಿ-3 ರಂತೆ ಕೃತ್ಯ ಸ್ಥಳ ಹಾಗೂ ಅಮಾನತು ಪಂಚನಾಮೆಯನ್ನು ಮಾಡಿ ನಾನು ಸಹಿ ಮಾಡಿದ್ದರು ಸಹ ಆರೋಪಿಗೆ ಸಹಾಯ ಮಾಡಲು ನಾನು ಸಹಿ ಮಾಡಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಆರೋಪಿ ಪರ ವಕೀಲರು ತಮ್ಮ ಪರ ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

ಮರು ವಿಚಾರಣೆ ಃ ಇಲ್ಲ ಃಃ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ.

ಸಾಕ್ಷಿದಾರರ ಸಹಿಃ